ಬಾರಾಕ ಹೇಳ್ಯಾರ. ಯಾಕಂದ್ರ. ಮಠದಾಗ ನಾಳೆ ಮಠಾಧೀಶರ ಸಭೆ ಐತೆ. ಪತ್ರಿಕಾಗೋಷ್ಠಿನೂ ಐತೆ. ಅದೇ ಸಂಗಪ್ಪನ ಮಗ್ಳು ಅಂತರ್‌ಜಾತಿ ಮದುವೆ ಮಾಡಿಕೊಂಡು ದುರಂತ ಸಾವು ಕಂಡಳಲ್ಲ...'

'ಅದನ್ಯಾಕ ನೆನಸ್ತಿಯಪ್ಪ. ಮೂರ್ಖ ಶಾಂತಪ್ಪನಿಗೆ ಚೂರು ದಯೇ, ಕರುಣೆ ಇದ್ದಿದ್ದರೆ ಹಂಗ ಮಾಡ್ತಿದ್ದನೇನು? ಬಸವ ತತ್ವಗಳ ವಿರೋಧಿಗಳು ಇಂಥವರೇ' ಚಂದ್ರಕಾಂತಯ್ಯ ಕುಗ್ಗಿದ.

'ಅದೇ ಸಂಬಂಧ ಈಗ ಮಠಾಧೀಶರುಗಳನ್ನು ಸಣ್ಣವರು ಸೇರಿಸುತ್ತಿದ್ದುದು. 'ಅಂತರ್‌ಜಾತಿ ವಿವಾಹಗಳಿಗೆ ನಮ್ಮ ಮಠಗಳು ವಿರೋಧವಿಲ್ಲ. ಜಾತಿ ಸಮಾನತೆ ತತ್ವವನ್ನೇ ನಾನು ನಂಬಿರುವುದು' ಎಂದು ಘೋಷಣೆ ಮಾಡ್ತಾರಂತ. ಪತ್ರಕರ್ತರೂ ಸಭೆಗೆ ಬರ್‍ತಾರಂತ'.

'ಈಗ ಹೊಸ ನಾಟ್ಕ ಸುರು ಮಾಡಿದ್ರೇನು?'

'ಅದು ನಾಟ್ಕನೇ! ಕಪಟನಾಟ್ಕ! ನನ್ಗ ಸಾಕಾಗ್ಯಾದ! ಸನಾತನಿಗಳು ಮಠವನ್ನು ವಶಕ್ಕೆ ತಗಂಡಂತಾಗಿದೆ ದೊಡ್ಡಪ್ಪ...'

'ಅದನ್ನ ನೋಡ್ತಿದೀನಿ! ಅಲ್ಲ ಶಿವಯ್ಯ, ಸಣ್ಣವರು ನನ್ನನ್ಯಾಕ ಸಭೆಗೆ ಬರಕ ಹೇಳ್ಯಾರ?' ಶಿವರುದ್ರಯ್ಯ ಹುಸಿ ನಗೆ ನಕ್ಕ!

'ಅದ್ಯಾಕಂದ್ರ, ನಾವು ಬಸವಣ್ಣನ ಅನುಯಾಯಿಗಳು ಎಂದು ಮಾತಾಡ್ತಾರ. ಅದನ್ನ ನೀನು ಕೇಳಲಿ ಅಂತ ತೋರ್‍ತದ.'

'ಕೇಳದೇನು ಬಂತು? ನೋಡಿವಿ. ಅನಭವಿಸಿವಿ...'

'ಶಿವಣ್ಣ, ಬೇಸಿದ್ದೇನು? ಮಜ್ಜಿಗೆ ಕುಡಿರಿ' ಎಂದು ಮಾಂತಮ್ಮ ಇಬ್ಬರಿಗೂ ಕೊಟ್ಟಳು.

'ಬೇಸಿದ್ದೀನಿ ಅಂತ ಹೇಳಂಗಿಲ್ಲ ಬುಡಕ್ಕ. ಅಕ್ಕ, ಸಣ್ಣವರು ನಿನ್ನನ್ನು ಆಗಾಗ ನೆನಸ್ತಾರ. ಲಿಂಗಪೂಜೆಗೆ ಮಾಂತಮ್ಮ ಬಿಲ್ವಪತ್ರಿ ತಂದು ಕೊಟ್ಟಂಗ ಈಗಿನವ್ರ್ಯಾರೂ ತರದಿಲ್ಲ. ಏನು ಮಾಡದು? ಗಂಡ-ಹೇಣ್ತಿ ಮಠಕ್ಕ ಬರವಲ್ಲರು. ಕಾಲ ಬದಲಾಗ್ತದ. ಹೊಂದಿಕೊಂಡು, ಹೋಗುವ ಗುಣ ದಂಪತಿಗಳಲ್ಲಿ ಬರಲಿಲ್ಲ. ನಿಷ್ಠುರತೆ ಬಾಳದಿನ ನಡಿಯದಿಲ್ಲ. ಅಂತಿದ್ರು' ಮಾಂತಮ್ಮ ಮಾತಾಡಲಿಲ್ಲ. ಕೇಳಿಸಿಕೊಂಡು ಸುಮ್ಮನಾದಳು.

'ದಾಸೋಹಕ್ಕೆ ಭಕ್ತರು ತಂದು ತಂದು ಅರ್ಪಿಸುವ ದವಸಧಾನ್ಯ, ಬೆಲ್ಲ, ಸಕ್ಕರೆ, ಅಡುಗೆ ಎಣ್ಣೆ, ತರಕಾರಿ ಎಲ್ಲ ಬಹಳ ಬರ್‍ತದ. ಆದ್ರ ಮಾಯವಾಗ್ತದ! ಆಕಳ ದಾನ ಹೆಚ್ಚಾಗ್ಯಾದ. ಹೈನ ಡೈರಿಗೆ ಹೋಗ್ತದ. ಹೋರಿಕರಗಳು ಸಂತೆಗೆ ಹೋಗ್ತವ. ಹೇಳಿದ್ರ ಬೆಳತನಕ ಹೇಳದೈತಿ. ನಿನ್ಗು ಗೊತ್ತೈತಿ. ಇರ್‍ಲಿ... ನೀನೂ ಮಠದಿಂದ ದೂರ ಸರದಂಗ ನನ್ಗೂ ಅಂಥ ಪ್ರಸಂಗ ಬರ್‍ಲಿ' ಎಂದು ಕೈಮುಗಿದು 'ಬರ್‍ತೀನಣ್ಣ' ಎಂದು ಎದ್ದು ತಲಬಾಗಿಲಿಗೆ ಬಂದ. ಚಂದ್ರಕಾಂತಯ್ಯ ಆತನನ್ನು ಕಳಿಸಿ ಬಂದ.

'ನೀನು ಹೊಲಕ್ಕ ಇವತ್ತು ಬರದಿಲ್ಲಂತಾಯ್ತು! ಮಠಾಧೀಶರ ಸಭೆಗೆ ಕರದಾರಂದ್ರ ಹೋಗಿ ಬಾ. ಹೊಲ್ದ ಕೆಲ್ಸಕ್ಕ ಅಳಿಯಂದಿರು ತಮ್ಮೂರಿನಿಂದ ಬರ್‍ತಾರ. ನಾನು ಬುತ್ತಿ ಮಾಡ್ಕಂಡು ಒಯ್ತೀನಿ' ಅಂದಳು ಮಾಂತಮ್ಮ.

ಚಂದ್ರಕಾಂತಯ್ಯನಿಗೆ ಮಠಕ್ಕೆ ಹೋಗುವ, ಬಿಡುವ ನಿರ್ಧಾರ ಮಾಡಲಾಗದೆ ಸುಮ್ನೆ ಕುಂತಿದ್ದ.

## 2

...ಚಂದ್ರಕಾಂತಯ್ಯನಿಗೆ ಈಗ ಎಪ್ಪತ್ತೇಳೋ ಎಪ್ಪತ್ತೆಂಟೋ ವಯಸ್ಸು. ಅವರ ತಂದೆ ಊರಾಗ ಸಣ್ಣ ರೈತ. ತಾನು ಏಳೆಂಟು ವರ್ಷದ ಹುಡುಗನಿದ್ದಾಗ ತಾನಿದ್ದ ಓಣಿಯಲ್ಲಿ ಸ್ವಾಮೀಜಿಯೊಬ್ಬರು ಕಂಡರು. ಅವರು ಓಣಿಓಣಿಯಲ್ಲಿ ತಿರುಗಿ, ಮನೆಮನೆ ಹೊಕ್ಕು 'ನಿಮ್ಮ ಮಕ್ಕಳನ್ನ ಮಠದ ಸಾಲಿಗೆ ಅಕ್ಷರ ತೀಡುವುದಕ್ಕೆ ಕಳಿಸಿ' ಎಂದು ಹೇಳುತ್ತಿದ್ದರು. ಚಂದ್ರಕಾಂತಯ್ಯ ಒಂದು ದಿನ ತನ್ನ ಮನೆ ಮುಂದೆ ಸ್ವಾಮೀಜಿ ಕಣ್ಣಿಗೆ ಬಿದ್ದು, ಆತನ ಅಪ್ಪನನ್ನು ಕರೆಸಿ 'ಮಗನ್ನ ಮಠದ ಸಾಲಿಗೆ ಕರಕೊಂಡು ಬಾ' ಎಂದು ಹೇಳಿದ್ದರು. ಸ್ವಾಮೀಜಿ ಹೀಂಗ ಊರುಕೇರಿಯಲ್ಲಿ ತಿರುಗಾಡಿ ಮಕ್ಕಳನ್ನು ಮಠದ ಸಾಲಿಗೆ ಕರೆಸಿಕೊಂಡು 'ಮಠದ ಸಾಲೆ'ಯನ್ನು ಮಾಡಿದ್ದರೂ ಅಕ್ಷರ ತೀಡಲು ಬರುತ್ತಿದ್ದುದು ಆರೇಳು

